ದಿನಾಂಕ 17-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಎಂ.ಎ.ಎಲ್ ವಕೀಲರಿಂದ:</u>**

6. ನನ್ನ ತಂದೆಯ ಹೆಸರು ಮಹಮ್ಮದ್ ಖಾಸಿಂ. ನನ್ನ ಅಜ್ಜನ ಹೆಸರು ಅಲ್ಲಾವುದ್ದೀನ್ ಸಾಬ್. ದಾವಾ ಆಸ್ತಿಯು ನನ್ನ ತಂದೆಗೆ ನನ್ನ ಅಜ್ಜನಿಂದ ಬಂದಿರುತ್ತದೆ. ನನ್ನ ಅಜ್ಜನಿಗೆ ದಾವಾ ಆಸ್ತಿಯು ಹೇಗೆ ಬಂದಿರುತ್ತದೆ ಎಂದು ಗೊತ್ತಿಲ್ಲ. ವಾದ ಪತ್ರದಲ್ಲಿ ನಮೂದಿಸಿರುವ ಅಳತೆಗಳ ಜಾಗವನ್ನು ಹೊರತುಪಡಿಸಿ ನನ್ನ ಅಜ್ಜನಿಗೆ ಹೆಚ್ಚಿನ ಆಸ್ತಿ ಇರುವುದಿಲ್ಲ. ನಾವು ವಾಸವಾಗಿರುವ ಮನೆಯು ಟಿ.ಎಂ.ಸಿ ಆಸ್ತಿ ಸಂ: 3917 ಮತ್ತು 3918 ಎರಡರಲ್ಲೂ ಇದೆ. ಸಾಕ್ಷಿ ಮುಂದುವರೆದು ಎರಡೂ ಆಸ್ತಿಗಳು ಮೂಲತಃ ಒಂದೇ ಆಸ್ತಿ ಇದ್ದು, ನನ್ನ ಅಜ್ಜನ ಹೆಸರಿನಲ್ಲಿ ಇದ್ದವು ಎಂದು ನುಡಿಯುತ್ತಾರೆ.

7. ಸಾಕ್ಷಿಗೆ ದಿ: 31-01-1981 ರ ಮೂಲ ನೋಂದಾಯಿತ ಖರೀದಿ ಪತ್ರವನ್ನು ತೋರಿಸಿ ಅದರ ಅಡಿಯಲ್ಲಿ ದಾವಾ ಆಸ್ತಿಯನ್ನು ನನ್ನ ತಂದೆ ಮಹಮ್ಮದ್ ಖಾಸಿಂ ರವರು 1 ನೇ ಪ್ರತಿವಾದಿಯ ತಂದೆ ಅಹಮದ್ ಸಾಬ್ ಭಂಡಾರಿ ರವರಿಗೆ ಮಾರಾಟ ಮಾಡಿರುತ್ತಾರೆ ಎಂದು ಸೂಚಿಸಿದಾಗ ಸಾಕ್ಷಿಯು ಸರಿಯಲ್ಲ ಎಂದು ನುಡಿದು ಸದರಿ ಖರೀದಿ ಪತ್ರವು ಮೋಸದ ಖರೀದಿ ಪತ್ರ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಒಂದು ಹಳೇಯ ಶೆಡ್ಡು ಇದೆ. ಸಾಕ್ಷಿಗೆ ಒಂದು ಛಾಯಾ ಚಿತ್ರ ತೋರಿಸಿ ಅದರಲ್ಲಿ ಕಂಡು ಬರುವ ವ್ಯಕ್ತಿಯು 1 ನೇ ಪ್ರತಿವಾದಿಯು ಎಂದು ನುಡಿಯುತ್ತಾರೆ. ಸದರಿ ಛಾಯಾ ಚಿತ್ರವನ್ನು ನಿ.ಡಿ-1 ಎಂದು ಗುರುತಿಸಲಾಯಿತು. ನಿ.ಡಿ-1 ರ ಛಾಯಾ ಚಿತ್ರದಲ್ಲಿ ಕಂಡು ಬರುವ ಮನೆ 1 ನೇ ಪ್ರತಿವಾದಿಗೆ ಸೇರಿದ್ದು ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ಪರ ವಕೀಲರು ಮನೆ ಎಂದು ಸೂಚಿಸಿದ ಭಾಗವನ್ನು ಈ ನ್ಯಾಯಾಲಯವು ಕೆಂಪು ಶಾಹಿಯಿಂದ ಗುರುತಿಸಲಾಗಿರುತ್ತದೆ. ಸಾಕ್ಷಿಗೆ ಮತ್ತೆ 3 ಛಾಯಾ ಚಿತ್ರಗಳನ್ನು ತೋರಿಸಿ ಅದರಲ್ಲಿ ಕಂಡು ಬರುವ ಶೀಟಿನಿಂದ ನಿರ್ಮಿತಗೊಂಡ ಮನೆಯನ್ನು ಮತ್ತು ಸದರಿ

ಮನೆಯ ಮುಂದೆ ನಿಲ್ಲಿಸಿರುವ ದ್ವಿಚಕ್ರ ವಾಹನವು 1 ನೇ ಪ್ರತಿವಾದಿಗೆ ಸೇರಿದ್ದಾಗಿರುತ್ತವೆ ಎಂಬ ಸೂಚನೆಗೆ ಸಾಕ್ಷಿಯು ನಿರಾಕರಿಸಿರುತ್ತಾರೆ. ಸಾಕ್ಷಿಯು ನಿರಾಕರಿಸಿದ ಸದರಿ ಛಾಯಾ ಚಿತ್ರಗಳನ್ನು ನಿ.ಡಿ-2 ರಿಂದ 4 ಎಂದು ಗುರುತಿಸಲಾಯಿತು.

8. ವಾದ ಪತ್ರದ ದಾವಾ ಆಸ್ತಿಯ ವರ್ಣನೆಯಲ್ಲಿ ದಾವಾ ಆಸ್ತಿಯು ಮನೆ ವ ಖುಲ್ಲಾ ಜಾಗದಿಂದ ಕೂಡಿದೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಮನೆ ಮತ್ತು ಖುಲ್ಲಾ ಜಾಗ ಎರಡೂ ಇರುತ್ತದೆ ಎಂದು ಮುನ್ಸಿಪಾಲ್ಟಿಯವರು ನೀಡಿರುವ ಕರ ನಿರ್ಧರಣಾ ಪಟ್ಟಿಯಲ್ಲಿ ನಮೂದು ಇರುವುದಿಲ್ಲ. ಮುನ್ಸಿಪಾಲ್ಟಿಯವರು ನೀಡಿರುವ ದಾವಾ ಆಸ್ತಿಯ ಕರ ನಿರ್ಧರಣಾ ಪಟ್ಟಿಯಲ್ಲಿ ಖುಲ್ಲಾ ಜಾಗಾ ಎಂದು ಮಾತ್ರ ನಮೂದಿಸ ಲಾಗಿರುತ್ತದೆ. ಸಾಕ್ಷಿ ಮುಂದುವರೆದು ಕರ ನಿರ್ಧರಣಾ ಪಟ್ಟಿಯಲ್ಲಿ ದಾವಾ ಆಸ್ತಿಯಲ್ಲಿ ನಾನು ನಿರ್ಮಿಸಿರುವ ಶೆಡ್ ಬಗ್ಗೆ ನಮೂದು ಇಲ್ಲದಿದ್ದರೂ ಶೆಡ್ ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ನನ್ನ ತಂದೆ ದಿಃ 31-01-1981 ರ ನೋಂದಾಯಿತ ಖರೀದಿ ಪತ್ರದ ಅಡಿಯಲ್ಲಿ 1 ನೇ ಪ್ರತಿವಾದಿಯ ತಂದೆಗೆ ಮಾರಾಟ ಮಾಡಿದ್ದರೂ ಮತ್ತು ಸದರಿ ಖರೀದಿ ದಿನಾಂಕದಿಂದಲೂ 1 ನೇ ಪ್ರತಿವಾದಿ ಮತ್ತು 2 ರಿಂದ 4 ನೇ ಪ್ರತಿವಾದಿಗಳು ವಾಸವಿದ್ದ ಬಗ್ಗೆ ನನಗೆ ತಿಳಿದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. 1 ನೇ ಪ್ರತಿವಾದಿಗೆ ಎಷ್ಟು ಆಸ್ತಿ ಇದೆ ಎಂದು ಗೊತ್ತಿಲ್ಲ. ಪ್ರತಿವಾದಿಗಳಿಗೆ ವಾದಿಯರಿಗಿಂತಲೂ ಕಡಿಮೆ ಆಸ್ತಿ ಇದೆ ಎಂದು ವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ. ಪ್ರತಿವಾದಿಗಳು ದಾವಾ ಆಸ್ತಿಯನ್ನು ವಹಿವಾಟು ಮಾಡಲು ತೊಂದರೆ ನೀಡಿದ ಕಾರಣಕ್ಕೆ ಅವರು ದಾಂಡಿಗ ಸ್ವಭಾವದವರು ಎಂದು ವಾದ ಪತ್ರದಲ್ಲಿ ಹೇಳಿರುತ್ತೇನೆ. ಪ್ರತಿವಾದಿಯರು ಬೇರೆಯವರೊಂದಿಗೆ ಹೇಗೆ ವರ್ತಿಸುತ್ತಾರೆ ಎಂದು ಗೊತ್ತಿಲ್ಲ. ನಾನು ವಾಸವಿರುವ ಅಕ್ಕಪಕ್ಕದ ವ್ಯಕ್ತಿಗಳಿಗೆ ಪ್ರತಿವಾದಿಯರ ವ್ಯಕ್ತಿತ್ವ ಹಾಗೂ ವರ್ತನೆ ಬಗ್ಗೆ

ಗೊತ್ತಿರುತ್ತದೆ. ದಾವಾ ಆಸ್ತಿಯನ್ನು ಕಬಳಿಸುವ ದುರುದ್ದೇಶದಿಂದ ನಾನು, 1 ನೇ ವಾದಿ ಮತ್ತು ಇತರ ಸಹೋದರ, ಸಹೋದರಿಯರು ಸೇರಿಕೊಂಡು ಸುಳ್ಳು ನೋಂದಾಯಿತ ವಾಟ್ನಿ ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗಾಗಲೀ ನನ್ನ ಸಹೋದರಿಯರಿಗಾಗಲೀ ಯಾವುದೇ ರೀತಿಯ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಆಸ್ತಿಯನ್ನು ವಹಿವಾಟು ಮಾಡಲು ವಾದಿಯರಿಗೆ ತೊಂದರೆ ನೀಡಿರುತ್ತಾರೆ ಎಂದು ವಾದ ಪತ್ರದಲ್ಲಿ ಸುಳ್ಳು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.
Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ